KASM200008942020

# ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊಸನಗರ

| | | |
|---|---|---|
| ಉಪಸ್ಥಿತರು | : | ರವಿಕುಮಾರ್ ಕೆ. ಬಿ.ಎ.ಎಲ್., ಎಲ್.ಎಲ್.ಬಿ.,<br>ಪ್ರ.ವ.ನ್ಯಾ.ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ,<br>ಹೊಸನಗರ. |
| ದಿನಾಂಕ | : | **19 ನೇ ಜುಲೈ, 2023** |
| ಅಸಲು.ದಾವೆ.ಸಂ. | : | 149/2020 |
| ವಾದಿ | : **1.** | ಶೃತಿ ಬಿ.ಕೋಂ ಗಣೇಶ,<br>ವಯಸ್ಸು ಸುಮಾರು 27 ವರ್ಷ,<br>ಉಃ ಕೂಲಿ ,<br>ವಾಸಃ ಕೇರ್ ಆಫ್ ಬೀರಪ್ಪ,<br>ಮುಂಬಾಳು, ಮುಂಬಾಳು ಅಂಚೆ,<br>ಆನಂದಪುರಂ ಹೋಬಳಿ,<br>ಸಾಗರ ತಾಲ್ಲೂಕು. |
| | **2.** | ರಕ್ಷ ಜಿ. ಬಿನ್ ಗಣೇಶ,<br>ವಯಸ್ಸು ಸುಮಾರು 8 ತಿಂಗಳು,<br>ಅಪ್ರಾಪ್ತ ವಯಸ್ಕರು ಇವರ ಪರ<br>ನೈಸರ್ಗಿಕ ಸಂರಕ್ಷಕರಾಗಿ<br>ತಾಯಿ ಶೃತಿ ಬಿ.ಕೋಂ ಗಣೇಶ,<br>ವಯಸ್ಸು ಸುಮಾರು 27 ವರ್ಷ,<br>ಕೂಲಿ ಕೆಲಸ, ವಾಸ ಃ ಕೇರ್ ಆಫ್ ಬೀರಪ್ಪ,<br>ಮುಂಬಾಳು  ಅಂಚೆ,<br>ಆನಂದಪುರಂ ಹೋಬಳಿ ,<br>ಸಾಗರ ತಾಲ್ಲೂಕು. |

(ಪ್ರತಿನಿಧಿಸುವವರು ಕೆ.ಬಿ.ಹರೀಶ್, ವಕೀಲರು)

: ವಿರುದ್ಧ :

ಪ್ರತಿವಾದಿಗಳು : 1. ಈಶ್ವರ ನಾಯ್ಕ
ಬಿನ್ ದಿ.ಕರಡಿನಾಯ್ಕ
ವಯಸ್ಸು ಸುಮಾರು 71 ವರ್ಷ
ಉಃ ವ್ಯವಸಾಯ,
ವಾಸಃ ಬರುವೆ ಗ್ರಾಮ, ರಿಪ್ಪನ್ ಪೇಟೆ ಅಂಚೆ,
ಕೆರೆಹಳ್ಳಿ ಹೋಬಳಿ,
ಹೊಸನಗರ ತಾಲ್ಲೂಕು.
ಶಿವಮೊಗ್ಗ ಜಿಲ್ಲೆ.

2. ಹೇಮರಾಜ್ ಬಿನ್ ಈಶ್ವರ ನಾಯ್ಕ,
ವಯಸ್ಸು ಸುಮಾರು 38 ವರ್ಷ,
ವ್ಯವಸಾಯ ಕಸುಬು,
ವಾಸಃ ಬರುವೆ ಗ್ರಾಮ, ರಿಪ್ಪನ್ ಪೇಟೆ ಅಂಚೆ,
ಕರೆಹಳ್ಳಿ ಹೋಬಳಿ, ಹೊಸನಗರ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ.

3. ಚಂದ್ರಕಲಾ ಕೋಂ ರುದ್ರಪ್ಪ,
ವಯಸ್ಸು ಸುಮಾರು 40 ವರ್ಷ,
ಗೃಹಿಣಿ, ವಾಸಃ ಮುಂಬಾರು,
ಮಾವಿನಕಟ್ಟೆ ಗ್ರಾಮ, ಮತ್ತು ಅಂಚೆ,
ಹೊಸನಗರ ತಾಲ್ಲೂಕು.

(ಪ್ರತಿನಿಧಿಸುವವರು ಶ್ರೀ ವೈ. ಪಿ. ಮಹೇಶ್, ವಕೀಲರು )

**<u>ವಾದಿ ಸಲ್ಲಿಸಿದ ಅರ್ಜಿ ಸಂಖ್ಯೆ 1, ಆದೇಶ 39 ನಿಯಮ 1 ಮತ್ತು 2<br>ಸಿಪಿಸಿ ರ ಮೇಲೆ ಆದೇಶ</u>**

ವಾದಿಯು ಸದರಿ ಅರ್ಜಿಯನ್ನು ಸಲ್ಲಿಸಿ, ಪ್ರತಿವಾದಿಗಳಾಗಲೀ, ಅವರ ಜನರಾಗಲೀ, ಅವರಿಂದ ಅಧಿಕಾರ ಪಡೆದ ಇನ್ಯಾರೇ ಆಗಲೀ, ದಾವಾ ತೀರ್ಮಾನ ಆಗುವವರೆಗೆ ದಾವಾ ಶೆಡ್ಯೂಲ್ ಸೊತ್ತನ್ನು ಬೇರೆಯವರಿಗೆ ಮಾರಾಟ ಮಾಡದಂತೆ, ಶೆಡ್ಯೂಲ್ ಸೊತ್ತನ್ನು ಆಧಾರ ಮಾಡಿ ಸಾಲ ಪಡೆಯದಂತೆ, ಪ್ರತಿವಾದಿ

ಮತ್ತು ಅವರ  ಜನರ ವಿರುದ್ಧ ತಾತ್ಕಾಲಿಕ ಪ್ರತಿಬಂಧಕಾಜ್ಞೆ ಆದೇಶ ಮಾಡಬೇಕೆಂದು ಕೋರಿರುತ್ತಾರೆ.

<u>ದಾವಾ ಷೆಡ್ಯೂಲ್ ಸ್ವತ್ತು</u>

**1.** ಹೊಸನಗರ ತಾಲ್ಲೂಕು, ಕೆರೆಹಳ್ಳಿ ಹೋಬಳಿ, ಬರುವೆ ಗ್ರಾಮದ ಸ.ನಂ.**84** ರಲ್ಲಿ **0.34** ಗುಂಟೆ ಜಮೀನು.

ಇದಕ್ಕೆ ಚತುರ್ಗಡಿಗಳುಃ

ಪೂರ್ವಕ್ಕೆ : ಬರುವೆ ಕೆರೆ

ಪಶ್ಚಿಮಕ್ಕೆ : ರಾಘು ಬಿನ್ ಭಾಸ್ಕರಭಟ್ಟ ಅವರಿಗೆ ಸೇರಿದ ಅಡಿಕೆ ತೋಟ

ಉತ್ತರಕ್ಕೆ : ಕೇಶವ ಬಿನ್ ಟೀಕಾನಾಯ್ಕ ಅವರಿಗೆ ಸೇರಿದ ಜಮೀನು

ದಕ್ಷಿಣಕ್ಕೆ : ಶೇಷಮ್ಮ ಕೋಂ ಕನ್ನ ನಾಯ್ಕ ಅವರಿಗೆ ಸೇರಿದ ಅಡಿಕೆ ತೋಟ

**2.** ಹೊಸನಗರ ತಾಲ್ಲೂಕು, ಕೆರೆಹಳ್ಳಿ ಹೋಬಳಿ, ಬರುವೆ ಗ್ರಾಮದ ಸ.ನಂ.**85** ರಲ್ಲಿ **2** ಎಕರೆ **03** ಗುಂಟೆ ಜಮೀನು.

ಇದಕ್ಕೆ ಚತುರ್ಗಡಿಗಳುಃ

ಪೂರ್ವಕ್ಕೆ : ಬರುವೆ ಕೆರೆ

ಪಶ್ಚಿಮಕ್ಕೆ : ರಾಘು ಬಿನ್ ಭಾಸ್ಕರಭಟ್ಟ ಅವರಿಗೆ ಸೇರಿದ ಅಡಿಕೆ ತೋಟ

ಉತ್ತರಕ್ಕೆ : ಈಶ್ವರನಾಯ್ಕ ಅವರಿಗೆ ಸರ್ವೆ ನಂ.**84** ರಲ್ಲಿ ಇರುವ ಜಮೀನು

ದಕ್ಷಿಣಕ್ಕೆ : ಶೇಷಮ್ಮ ಕೋಂ ಕನ್ನ ನಾಯ್ಕ ಅವರಿಗೆ ಸೇರಿದ ಅಡಿಕೆ ತೋಟ

**3.** ಹೊಸನಗರ ತಾಲ್ಲೂಕು, ಕೆರೆಹಳ್ಳಿ ಹೋಬಳಿ, ಬರುವೆ ಗ್ರಾಮದ ಡಿ.ಆರ್.ನಂ.**22** ರಲ್ಲಿರುವ **45, 23** ಅಡಿ ಅಳತೆಯ ವಾಸದ ಮನೆ ಇದಕ್ಕೆ ಚತುರ್ಗಡಿಗಳುಃ

ಪೂರ್ವಕ್ಕೆ : ತಮಡಿಕೊಪ್ಪಕ್ಕೆ ಹೋಗುವ ರಸ್ತೆ

ಪಶ್ಚಿಮಕ್ಕೆ : ಕೇಶವ ಬಿನ್ ಟೀಕಾನಾಯ್ಕ ಅವರಿಗೆ ಸೇರಿದ ಮನೆ

ಉತ್ತರಕ್ಕೆ : ಪಂಚಾಯತಿ ರಸ್ತೆ

ದಕ್ಷಿಣಕ್ಕೆ : ಈಶ್ವರ ನಾಯ್ಕ ಅವರಿಗೆ ಸೇರಿದ ಮಂಗಳೂರು ಹಂಚಿನ ಮನೆ

(ಇನ್ನೂ ಮುಂದೆ ದಾವಾಸ್ಥಿ ಎಂದು ಕರೆಯಲಾಗುವುದು)

2. ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ-

1 ನೇ ವಾದಿಯು ಗಣೇಶ ಬಿ ಇವರ ಹೆಂಡತಿಯಾಗಿದ್ದು, 2 ನೇ ವಾದಿಯು 1 ನೇ ವಾದಿಯ ಮಗಳಾಗಿದ್ದು, ಅಪ್ರಾಪ್ತ ವಯಸ್ಕರಾಗಿರುವ ಕಾರಣ 1 ನೇ ವಾದಿಯು ಅವರ ನೈಸರ್ಗಿಕ ಸಂರಕ್ಷಕರಾಗಿ ಈ ದಾವೆಯನ್ನು ಅವರ ಪರ ಸಲ್ಲಿಸುತ್ತಿದ್ದಾರೆ. 1 ನೇ ಪ್ರತಿವಾದಿಯು 1 ನೇ ವಾದಿಯ ಗಂಡನ ತಂದೆಯಾಗಿರುತ್ತಾರೆ. 2 ನೇ ಪ್ರತಿವಾದಿಯು 1 ನೇ ವಾದಿಯ ಗಂಡನ ಅಣ್ಣ ಹಾಗೂ 3 ನೇ ಪ್ರತಿವಾದಿಯ 1 ನೇ ವಾದಿಯ ಗಂಡನ ಅಕ್ಕನಾಗಿರುತ್ತಾಳೆ. 1 ನೇ ವಾದಿಯ ಗಂಡ ದಿನಾಂಕ 28.02.2020 ರಂದು ಮರಣಹೊಂದಿರುತ್ತಾರೆ.

3. ವಾದಿಯ ಕುಟುಂಬಕ್ಕೆ ಅಂದರೆ 1 ನೇ ಪ್ರತಿವಾದಿಯ ಹೆಸರಿಗೆ ಹೊಸನಗರ ತಾಲ್ಲೂಕು, ಕೆರೆಹಳ್ಳಿ ಹೋಬಳಿ ಬರುವೆ ಗ್ರಾಮದ ಸರ್ವೆ ನಂ.84 ರಲ್ಲಿ 0.34 ಗುಂಟೆ ಜಮೀನು ಹೊಸನಗರ ತಾಲ್ಲೂಕು ಕೆರೆಹಳ್ಳಿ ಹೋಬಳಿ ನಾಡಕಛೇರಿಯ ತ.ಹ.ಬ. ಪ್ರಕರಣ ಸಂಖ್ಯೆ 2/1989-90 ರಲ್ಲಿ ದಿನಾಂಕ 17.06.1989 ರಂದು ಆಗಿರುವ ಆದೇಶದ ಪ್ರಕಾರ ಎಂ.ಆರ್.ನಂ.19/1988-89 ರ ಪ್ರಕಾರ ಖಾತೆ ಬದಲಾವಣೆ ಆಗಿರುವ ಪಿತ್ರಾರ್ಜಿತ ಸೊತ್ತಾಗಿರುತ್ತದೆ. ಅದೇ ರೀತಿ ಹೊಸನಗರ ತಾಲ್ಲೂಕು, ಕೆರೆಹಳ್ಳಿಹೋಬಳಿ ಬರುವೆ ಗ್ರಾಮದ ಸರ್ವೆನಂ.85 ರಲ್ಲಿ 2 ಎಕರೆ 3 ಗುಂಟೆ ಜಮೀನು ವಾದಿ ಪ್ರತಿವಾದಿಯರ ಕುಟುಂಬದ ಪಿತ್ರಾರ್ಜಿತ ಆಸ್ತಿಯಾಗಿದ್ದು , ವಾದಿಯ ತಾಯಿ ಹೂವಮ್ಮ ಕೋಂ. ಕರಡಿನಾಯಕ ಇವರು ದಿನಾಂಕ

27.10.1998 ರಂದು ಪೌತಿಯಾಗಿದ್ದು ಅವರ ಮರಣಾನಂತರ ಐಎನ್ ಹೆಚ್ 6/1998-99 ರ ಪ್ರಕಾರ ದಿನಾಂಕ 07.01.1999 ರಂದು 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆ ಆಗಿರುವ ಪಿತ್ರಾರ್ಜಿತ ಸೊತ್ತಾಗಿರುತ್ತದೆ. ಅದೇ ರೀತಿ ಹೊಸನಗರ ತಾಲ್ಲೂಕು ಕೆರೆಹಳ್ಳಿ ಹೋಬಳಿ ಬರುವೆ ಗ್ರಾಮದ ಡಿ.ಆರ್.ನಂ.22 ರಲ್ಲಿ 45x23 ಅಡಿ ಅಳತೆಯ ವಾಸದ ಮನೆ ಮತ್ತು ಇದೇ ಗ್ರಾಮದಲ್ಲಿರುವ 30x25 ಅಡಿ ಅಳತೆಯ ವಾಸದ ಮನೆಗಳು 1 ನೇ ಪ್ರತಿವಾದಿಗೆ ಬಂದಿರುವ ಪಿತ್ರಾರ್ಜಿತ ಸೊತ್ತಾಗಿರುತ್ತದೆ. ಮೇಲ್ಕಂಡ ಸೊತ್ತುಗಳು ವಾದಿಪ್ರತಿವಾದಿಯರ ಜಂಟೀ ಸ್ವಾಧೀನಾನುಭವದಲ್ಲಿರುವ ಒಟ್ಟು ಕುಟುಂಬದ ಪಿತ್ರಾರ್ಜಿತ ಸೊತ್ತಾಗಿರುತ್ತದೆ. ಇನ್ನು ಮುಂದೆ ಮೇಲ್ಕಂಡ ಸೊತ್ತುಗಳನ್ನು ದಾವಾ ಶೆಡ್ಯೂಲ್ ಸೊತ್ತು ಎಂದು ಕರೆಯಲಾಗುತ್ತದೆ.

4. 1 ನೇ ವಾದಿಗೂ ಮತ್ತು 1 ನೇ ಪ್ರತಿವಾಯ 2 ನೇ ಗಂಡು ಮಗನಾದ ಗಣೇಶ ಬಿ.ಈ (ವಿರೂಪಾಕ್ಷ ) ಇವರಿಗೆ ದಿನಾಂಕ 30.05.2019 ರಂದು 1 ನೇ ಪ್ರತಿವಾದಿಯ ಮನೆಯಲ್ಲಿ ವಿವಾಹವಾಗಿರುತ್ತದೆ. ವಿವಾಹವಾದ ಕೆಲ ಸಮಯದವರೆಗೆ 1 ನೇ ಪ್ರತಿವಾದಿಯ ಕುಟುಂಬದವರು 1 ನೇ ವಾದಿಯನ್ನು ಚೆನ್ನಾಗಿ ನೋಡಿಕೊಂಡಿದ್ದು, ಆ ನಂತರದಲ್ಲಿ 1 ಮತ್ತು 2 ನೇ ಪ್ರತಿವಾದಿಯರು ವಿನಾಕಾರಣ 1 ನೇ ವಾದಿಯ ಗಂಡನೊಂದಿಗೆ ಜಗಳ ಮಾಡುತ್ತಿದ್ದರು. ಈ ಮಧ್ಯೆ 1 ನೇ ವಾದಿಯ ತುಂಬು ಗರ್ಭಿಣಿ ಆಗಿದ್ದು, ಹೆರಿಗೆಗೆಂದು ತವರು ಮನೆಗೆ ಬಂದಿರುತ್ತಾರೆ. ಈ ಸಮಯದಲ್ಲಿ 1 ನೇ ವಾದಿಯು ತುಂಬು ಗರ್ಭಿಣಿ ಆಗಿದ್ದು, ಹೆರಿಗೆಗೆಂದು ತವರು ಮನೆಗೆ ಬಂದಿರುತ್ತಾರೆ. ಈ ಸಮಯದಲ್ಲಿ 1 ನೇ ವಾದಿಯ ಗಂಡ 2 ನೇ ವಾದಿಯ ತಂದೆ ಗಣೇಶ ಬಿ.ಈ (ವಿರೂಪಾಕ್ಷ) ಈತನು ದಿನಾಂಕ

28.02.2020 ರಂದು ಮೃತ ಹೊಂದಿರುತ್ತಾರೆ. 1 ನೇ ವಾದಿ ಹಾಗೂ 1 ನೇ ಪ್ರತಿವಾದಿಯ ಮಗನಾದ ಗಣೇಶ ಬಿ.ಈ. (ವಿರೂಪಾಕ್ಷ) ಇವರ ದಾಂಪತ್ಯಿಕ ಜೀವನದಿಂದ 2 ನೇ ವಾದಿಯು ದಿನಾಂಕ 02.03.2020 ರಂದು ಜನಿಸಿರುತ್ತಾರೆ. 1 ನೇ ವಾದಿಯ ಗಂಡನ ಮರಣಾನಂತರ ಪ್ರತಿವಾದಿಯರು ವಾದಿಯರಿಗೆ ಜೀವನ ನಿರ್ವಹಣೆಗೆಂದು ಅಂದರೆ ಊಟ, ಬಟ್ಟೆ ವಸತಿ , ಔಷಧೋಪಚಾರಕ್ಕೆಂದು ಏನೊಂದು ವ್ಯವಸ್ಥೆ ಮಾಡಿರುವುದಿಲ್ಲ. ಈ ಸಂಬಂಧ 1 ನೇ ವಾದಿಯು ಹಲವಾರು ಬಾರಿ 1 ಮತ್ತು 2 ನೇ ಪ್ರತಿವಾದಿ ಬಳಿ ಜೀವನ ನಿರ್ವಹಣೆಗೆ ಹಣ ನೀಡುವಂತೆ ಕೇಳಿದ್ದು 1 ಮತ್ತು 2 ನೇ ಪ್ರತಿವಾದಿಯರು ಯಾವುದೇ ಹಣ ನೀಡದೇ ಕಾಲಹರಣ ಮಾಡುತ್ತಾ ಬಂದಿರುತ್ತಾರೆ. 1 ಮತ್ತು 2 ನೇ ವಾದಿಯರು ಅನಿವಾರ್ಯವಾಗಿ ಮೇಲೆ ಶಿರೋನಾಮೆಯಲ್ಲಿ ಹೇಳಿದ ತಂದೆಯ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ. ಅಲ್ಲದೆ 1 ನೇ ವಾದಿಯ ತಂದೆಯ ಮನೆಯವರು ಸಹ ಕಡು ಬಡವರಾಗಿದ್ದು, ವಾದಿಯರ ಜೀವನ ನಿರ್ವಹಣೆ ಮಾಡಿಸುವುದು ಕಷ್ಟ ಸಾಧ್ಯವಾಗಿರುತ್ತದೆ. ಅಲ್ಲದೇ 1 ನೇ ವಾದಿಗೆ ಯಾವುದೇ ಹೆಚ್ಚಿನ ವಿದ್ಯಾಭ್ಯಾಸ ಇಲ್ಲದೆ ಇರುವುದರಿಂದ ಮತ್ತು 2 ನೇ ವಾದಿಯು ಸಣ್ಣ ಮಗುವಾಗಿದ್ದರಿಂದ ಹೊರಗಡೆ ಹೋಗಿ ಕೂಲಿ ಕೆಲಸ ಮಾಡಿ ಜೀವನ ನಡೆಸುವುದು ಕಷ್ಟಸಾಧ್ಯವಾಗಿರುತ್ತದೆ.

5. ವಾದಿಗಳಿಗೆ ದಾವಾ ಸೊತ್ತಿನಲ್ಲಿ ತಲಾ ¼ ಭಾಗದ ಹಿಸ್ಸಾ ಹಕ್ಕು ಇರುತ್ತದೆ. ತಮ್ಮ ಹಿಸ್ಸಾ ಹಕ್ಕನ್ನು ಪ್ರತ್ಯೇಕವಾಗಿ ವಿಂಗಡಿಸಿಕೊಡುವಂತೆ ವಾದಿಯ ಪ್ರತಿವಾದಿಯ ಬಳಿ 2020 ನೇ ಇಸವಿ ಅಕ್ಟೋಬರ್ ತಿಂಗಳ ಮೊದಲವಾರದಲ್ಲಿ ಕೇಳಿದಾಗ ಪ್ರತಿವಾದಿಗಳು ದಾವಾ ಸೊತ್ತನ್ನು ವಿಭಾಗ ಮಾಡಿ ಸ್ವಾಧೀನ ವಹಿಸಿಕೊಡಲು ನಿರಾಕರಿಸಿರುತ್ತಾರೆ. ಆದ್ದುದರಿಂದ ಸೂಕ್ತ ಪರಿಹಾರ ಕೋರಿಕೊಂಡಿರುತ್ತಾರೆ

ಹಾಗೂ ದಾವೆಯ ಜೊತೆಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 1, ಆದೇಶ 39 ನಿಯಮ 1 ಮತ್ತು 2 ರಂತೆ ಸಿಪಿಸಿ ಅರ್ಜಿ ಸಲ್ಲಿಸಿರುತ್ತಾರೆ.

6. ಸದರಿ ದಾವೆಯ ಸಮನ್ಸ್ ನ್ನು ಪ್ರತಿವಾದಿಯವರಿಗೆ ಬರೆದು ನೀಡಲಾಗಿ, ಅವರು ತಮ್ಮ ಪರ ವಕೀಲರ ಮೂಲಕ ಹಾಜರಾಗಿರುತ್ತಾರೆ. 2 ನೇ ಪ್ರತಿವಾದಿಯು ಸಲ್ಲಿಸಿದಂತಹ ಲಿಖಿತ ಹೇಳಿಕೆಯನ್ನು ಈ ದಾವೆಯ 1 ಮತ್ತು 3 ನೇ ಪ್ರತಿವಾದಿಯರು ಅನುಮೋದಿಸಿಕೊಳ್ಳುತ್ತಾ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ.

7. 2 ನೇ ಪ್ರತಿವಾದಿಯು ತನ್ನ ಪರ ಸಲ್ಲಿಸಿರುವ ಪ್ರತಿವಾದ ಪತ್ರದ ವಾಸ್ತವಾಂಶ ಈ ಕೆಳಕಂಡಂತೆ ಇರುತ್ತದೆಃ

ವಾದಿಯ ಈ ದಾವೆಯು ಕಾನೂನಿನಡಿಯಾಗಲೀ ಅಥವಾ ವಾಸ್ತವಾಂಶಗಳಡಿಯಾಗಲೀ ನಿಲ್ಲತಕ್ಕದಾಗಿರುದೇ ಈ ಹಂತದಲ್ಲಿಯೇ ವಜಾಗೊಳಿಸಲು ಯೋಗ್ಯವಾಗಿರುತ್ತದೆ. ವಾದಿಯು ತನ್ನ ವಾದಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯಗಳು ಶುದ್ಧ ಸುಳ್ಳಾಗಿದ್ದು, ಈ ಪ್ರತಿವಾದಿಯರು ಈ ಮೂಲಕ ನಿರ್ಧಿಷ್ಟವಾಗಿ ಸುಳ್ಳೆಂದು ಅಲ್ಲಗಳೆಯುತ್ತಾರೆ. ವಾದ ಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯಗಳನ್ನು ವಾದಿಯೇ ಖುದ್ದು ಸಾಬೀತು ಪಡಿಸತಕ್ಕದಾಗಿರುತ್ತದೆ. ವಾದಿಯರು ಹಾಗೂ ಪ್ರತಿವಾದಿಗಳು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರು ಎನ್ನುವುದು ಶುದ್ಧ ಸುಳ್ಳಾಗಿದ್ದು ವಾದಿಯೇ ಖುದ್ದು ರುಜುವಾತುಪಡಿಸತಕ್ಕದ್ದಾಗಿರುತ್ತದೆ. ದಾವಾ ಶೆಡ್ಯೂಲ್ ಸೊತ್ತುಗಳು ಒಟ್ಟು ಕುಟುಂಬದ ಆಸ್ತಿಗಳಾಗಿರುವುದಿಲ್ಲ. 1 ನೇ ಪ್ರತಿವಾದಿ ಹಾಗೂ ಅವರ ತಾಯಿಯಾದ ಮೃತ ಹೂವಮ್ಮಳ ಸ್ವಯಾರ್ಜಿತ

ಸೊತ್ತುಗಳಾಗಿರುತ್ತವೆ. ದಾವಾ ಶೆಡ್ಯೂಲ್ ಸೊತ್ತುಗಳು ಪಿತ್ರಾರ್ಜಿತ ಆಸ್ತಿಗಳೆನ್ನುವುದನ್ನು ವಾದಿಯೇ ರುಜುವಾತುಪಡಿಸತಕ್ಕದ್ದಾಗಿರುತ್ತದೆ.

8. ವಾದಿಗೆ ಈ ದಾವೆ ಹಾಕಲು ಕಾನೂನಿನಲ್ಲಿ ಮಾನ್ಯತೆ ಇರುವುದಿಲ್ಲ. ಹಾಗೆಯೇ 2 ನೇ ವಾದಿಯ ಪರ ದಾವೆ ಸಲ್ಲಿಸಲು ಸಹ ಸ್ವಾಭಾವಿಕ ರಕ್ಷಕಿ ಎಂಬ ಬಗ್ಗೆ ಸಂಬಂಧಿಸಿದ ನ್ಯಾಯಾಲಯದಿಂದ ಅನುಮತಿ ತೆಗೆದುಕೊಳ್ಳದೆ ತಂದ ಈ ದಾವೆಯನ್ನು ಪ್ರಾಥಮಿಕ ವಿಚಾರಣೆಗೊಳಪಡಿಸಿ, ವಜಾಗೊಳಿಸತಕ್ಕದ್ದಾಗಿರುತ್ತದೆ. 1 ನೇ ವಾದಿಯ ಗಂಡ ವಿವಾಹ ಪೂರ್ವದಲ್ಲಿಯೇ ಅಂದರೆ ಚಿಕ್ಕ ವಯಸ್ಸಿನಲ್ಲಿಯೇ ಮನೆಬಿಟ್ಟು ಹೋದವನು ಮನೆಗೆ ಬಾರದೆ, ಹೊರಗಡೆ ಊರುಗಳಲ್ಲಿಯೇ ನೆಲೆಸಿದ್ದು ಇರುತ್ತದೆ. 1 ನೇ ವಾದಿಯ ವಿವಾಹದ ನಂತರುವೂ ಸಹ 1 ನೇ ವಾದಿಯ ಗಂಡ ತಂದೆ ತಾಯಿ ಮತ್ತು ಸಹೋದರರ ಜೊತೆ ವಾಸವಾಗಿರದೆ ಪ್ರತ್ಯೇಕ ಸಂಸಾರ ವ್ಯವಹಾರದಲ್ಲಿ ತೊಡಗಿಸಿಕೊಂಡಿರುತ್ತಾನೆ. 1 ನೇ ವಾದಿಯು ಈ ಪ್ರತಿವಾದಿಯರುಗಳ ಮನೆಯಲ್ಲಿ ಯಾವತ್ತೂ ಸಹ ವಾಸವಾಗಿರುವುದಿಲ್ಲ. ವಾದಿಯು ಸುಳ್ಳು ಕಾರಣಗಳನ್ನು ಹೇಳಿಕೊಂಡು ತಂದ ಈ ದಾವೆಯನ್ನು ವಜಾಗೊಳಿಸತಕ್ಕದ್ದಾಗಿರುತ್ತದೆ.

9. ವಾದಿ ಹೇಳಿದಂತೆ 1 ನೆ ವಾದಿಯ ಗಂಡ ಮರಣ ಹೊಂದಿದ ನಂತರ ಪ್ರತಿವಾದಿಯರು ಜಗಳವಾಡುತ್ತದ್ದರು ಎನ್ನುವುದಾಗಲಿ, ಈ ಸಮಯದಲ್ಲಿ 1 ನೇ ವಾದಿ ಗರ್ಭಿಣಿಯಾಗಿದ್ದಳು ಎನ್ನುವುದಾಗಲೀ, ವಾದಿ ಮತ್ತು ವಾದಿಯ ಮಗಳಿಗೆ ಅನ್ನ ಆಹಾರ ಬಟ್ಟೆ ಏನೊಂದು ಕೊಡದೆ ಹಿಂಸೆ ನೀಡಿದ್ದರು ಎಂಬ ಇತ್ಯಾದಿ ಎಲ್ಲಾ ವಿಷಯಗಳು ವಾದಿ ಈ ದಾವೆಗಾಗಿ ಸೃಷ್ಟಿಸಿಕೊಂಡ ಕಾಲ್ಪನಿಕ ಕಟ್ಟು ಕತೆಯಾಗಿರುತ್ತದೆ. ಈ ಪ್ರತಿವಾದಿಯರು ವಾದಪತ್ರದಲ್ಲಿ ಹೇಳಿರುವ ಎಲ್ಲಾ

ವಿಷಯಗಳನ್ನು ಸಂಪೂರ್ಣವಾಗಿ ಸುಳ್ಳೆಂದು ನಿರ್ದಿಷ್ಟವಾಗಿ ಈ ಮೂಲಕ ಅಲ್ಲಗಳೆಯುತ್ತಾರೆ.

10. ವಾದಿಯು ದಾವಾ ಸ್ವತ್ತುಗಳನ್ನು ಹಿಸ್ಸೆ ವಿಭಾಗ ಮಾಡಿಕೊಡುವಂತೆ 2020 ರ ಸೆಪ್ಟೆಂಬರ್ ತಿಂಗಳಿನಲ್ಲಿ ಕೇಳಿಕೊಂಡಿದ್ದಳು ಎನ್ನು ವುದಾಗಲಿ, ಇದಕ್ಕೆ ಪ್ರತಿವಾದಿಗಳು ನಿರಾಕರಿಸಿದರು ಎಂಬ ಇತ್ಯಾದಿ ಎಲ್ಲಾ ವಿಷಯಗಳನ್ನು ವಾದಿಯೇ ಖುದ್ದು ಸಾಬೀತುಪಡಿಸತಕ್ಕದ್ದಾಗಿರುತ್ತದೆ. 1 ನೇ ವಾದಿಯ ಹಿಂಸೆ-ಕಿರುಕುಳದಿಂದ ಮಾನಸಿಕವಾಗಿ ಮತ್ತು ದೈಹಿಕವಾಗಿ ನೊಂದು ವಾದಿಯ ಗಂಡ ಮರಣ ಹೊಂದಿರುತ್ತಾನೆ. ಈ ಎಲ್ಲಾ ವಸ್ತುಸ್ಥಿತಿ ಮತ್ತು ವಾಸ್ತವಾಂಶಗಳನ್ನು ಮರೆಮಾಚಿ ಈ ಪ್ರತಿವಾದಿಯರ ವಿರುದ್ಧ ತಂದ ಈ ಸುಳ್ಳು ದಾವೆಯನ್ನು ವಜಾಗೊಳಿಸತಕ್ಕದ್ದಾಗಿರುತ್ತದೆ.

11. ದಾವಾ ಶೆಡ್ಯೂಲ್ ಸೊತ್ತುಗಳ 1 ನೇ ಪ್ರತಿವಾದಿಯ ಮತ್ತು ಇವರ ಹೆಂಡತಿ ಯಶೋದಮ್ಮಳ ಸ್ವಯಾರ್ಜಿತ ಸೊತ್ತಾಗಿದ್ದು, ವಾದಿಗಾಗಲಿ, ವಾದಿಯ ಮಗಳಿಗಾಗಲಿ ದಾವಾ ಶೆಡ್ಯೂಲ್ ಸೊತ್ತಿನಲ್ಲಿ ಯಾವುದೇ ರೀತಿಯ ಹಕ್ಕು, ಮಾಲಿಕತ್ವ ಇರುವುದಿಲ್ಲ. ವಾದಿ-ಪ್ರತಿವಾದಿಯರುಗಳ ಒಟ್ಟು ಕುಟುಂಬದ ಆಸ್ತಿತ್ವದಲ್ಲಿರುವುದಿಲ್ಲ. ಪ್ರತಿವಾದಿಯರುಗಳಿಗೆ ಹೆದರಿಸಿ, ಬೆದರಿಸಿ, ಅಕ್ರಮ ಲಾಭ ಪಡಯಬೇಕೆಂದು ತಂದ ವಾದಿಯ ಈ ಸುಳ್ಳು ದಾವೆಯನ್ನು ವಜಾಗೊಳಿಸತಕ್ಕದ್ದಾಗಿರುತ್ತದೆ. ವಾದಿಯ ಈ ದಾವೆಗೆ ಯಾವುದೇ ರೀತಿಯ ವ್ಯಾಜ್ಯ ಕಾರಣ ಉಂಟಾಗಿರುವುದಿಲ್ಲ. ಸದ್ರಿ ವ್ಯಾಜ್ಯ ಕಾರಣವು ಮೋಸದ್ದು, ಸುಳ್ಳಿನಿಂದ ಕೂಡಿದ್ದಾಗಿದ್ದು, ವಾದಿ ಈ ದಾವೆಗಾಗಿ

ಸೃಷ್ಟಿಸಿಕೊಂಡ ಕಾಲ್ಪನಿಕ ವ್ಯಾಜ್ಯ ಕಾರಣವಾಗಿದ್ದು, ವಾದಿಯ ದಾವೆಯನ್ನು ವಜಾಗೊಳಿಸತಕ್ಕದ್ದಾಗಿರುತ್ತದೆ.

12. ವಾದಿಯು ದಾವಾ ಶೆಡ್ಯೂಲ್ ಸೊತ್ತುಗಳನ್ನು ಸರಿಯಾಗಿ ಮೌಲ್ಯಮಾಪನಕ್ಕೆ ಒಳಪಡಿಸಿರುವುದಿಲ್ಲ. ಸದ್ರಿ ದಾವೆಯಲ್ಲಿ ನ್ಯಾಯಾಲಯದ ಶುಲ್ಕ ಪಾವತಿಸಿದ್ದು ಸರಿ ಇರುವುದಿಲ್ಲವಾದ್ದರಿಂದ ವಾದಿಯ ದಾವೆಯನ್ನು ವಜಾಗೊಳಿಸತಕ್ಕದ್ದಾಗಿರುತ್ತದೆ. ವಾದಿಗೆ ದಾವಾಸ್ಥಿಗಳ ಬಗ್ಗೆ ಮಾಹಿತಿಯಾಗಲಿ, ವಸ್ತುಸ್ಥಿತಿಯಾಗಲಿ ತಿಳಿದಿರುವುದಿಲ್ಲ. ದಾವಾ ಸೊತ್ತುಗಳ ವರ್ಣನೆ, ಸ್ವರೂಫ ಚತುರ್ಗಡಿಗಳು ಸರಿ ಇರುವುದಿಲ್ಲ ಹಾಗೂ ವಾದಿಗೆ ದಾವಾಸ್ಥಿಯನ್ನು ಗುರುತಿಸಲು ಅಸಾಧ್ಯವಾಗಿದ್ದು, ವಾದಿಯ ದಾವೆಯನ್ನು ವಜಾಗೊಳಿಸತಕ್ಕದ್ದಾಗಿರುತ್ತದೆ. ವಾದಿಯು ತಮ್ಮ ವಾದಿಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯಗಳು ಶುದ್ಧ ಸುಳ್ಳಾಗಿದ್ದು, ಈ ಪ್ರತಿವಾದಿಯರು ಈ ಮೂಲಕ ಸುಳ್ಳೆಂದು ನಿರ್ದಿಷ್ಟವಾಗಿ ಅಲ್ಲಗಳೆಯುತ್ತಾರೆ. ವಾದಿ-ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರಾಗಿರುವುದಿಲ್ಲ ಮತ್ತು ದಾವಾಶೆಡ್ಯೂಲ್ ಸೊತ್ತುಗಳು ವಾದಿಯರ ಹಾಗೂ ಪ್ರತಿವಾದಿಯರುಗಳ ಪಿತ್ರಾರ್ಜಿತ ಆಸ್ತಿಗಳಾಗಿರುವುದಿಲ್ಲ. ವಾದಪತ್ರದ ಎಲ್ಲಾ ಅಂಶಗಳನ್ನು ವಾದಿಯೇ ಖುದ್ದು ರುಜುವಾತುಪಡಿಸಿತಕ್ಕದ್ದಾಗಿರತ್ತದೆ. ಸದ್ರಿ ದಾವೆಯ ವಾಸ್ತವಿಕತೆಗೆ ದೂರವಾಗಿದ್ದು, ವಾದಿಯ ದಾವೆಯನ್ನು ವಜಾಗೊಳಿಸತಕ್ಕದ್ದಾಗಿರುತ್ತದೆ. ವಾದಿಯು ಮಾನ್ಯ ಘನ ನ್ಯಾಯಾಲಯಕ್ಕೆ ಶುದ್ಧ ಹಸ್ತಳಾಗಿ ಬಂದಿರುವುದಿಲ್ಲ. ವಾದಿಯ ಪರ ವಾದಬಾಹುಳ್ಯವಿರುವ ಕೇಸು ಮತ್ತು ಸಮಾನತೆಯ ಸಂಕುಲತೆ ವಾದಿ ಪರ ಇರುವುದಿಲ್ಲ. ವಾದಿಯು ಪ್ರತಿವಾದಿಯರಿಗೆ ಆಗದವರ ಮಾತು ಕೇಳಿಕೊಂಡು ತಂದ ಈ ಸುಳ್ಳು ದಾವೆಯನ್ನು

ವಜಾಗೊಳಿಸತಕ್ಕದ್ದಾಗಿರುತ್ತದೆ. ಆದ್ದರಿಂದ ವಾದಿಯ ದಾವೆಯ ಸದರಿ ಅರ್ಜಿಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು ಪ್ರತಿವಾದಿಯು ಕೋರಿಕೊಂಡಿರುತ್ತಾರೆ.

**13.** ವಾದಿಯರ ಪರವಾಗಿ ಪ್ರಜ್ಞಾ ವಕೀಲರಾದ ಶ್ರೀ.ಕೆ.ಬಿ.ಹರೀಶ್ ಹಾಗೂ ಪ್ರತಿವಾದಿಯ ಪರ ಪ್ರಜ್ಞಾ ವಕೀಲರಾದ ಶ್ರೀ.ವೈ.ಪಿ.ಮಹೇಶ್, ಇವರ ವಾದವನ್ನು ಆಲಿಸಲಾಯಿತು ಮತ್ತು ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು

**14.** ಈ ಪ್ರಕರಣದ ಇತ್ಯರ್ಥಕ್ಕಾಗಿ ಉದ್ಭವಿಸಿರುವ ಅಂಶಗಳು ಈ ಕೆಳಗಿನಂತಿವೆ.

| | | |
|---|---|---|
| 1 ನೇ ಅಂಶ | : | ವಾದಿಯು ತನ್ನ ಪರ ಮೇಲ್ನೋಟಕ್ಕೆ ನಿರ್ಧರಿಸಲು ಪ್ರಕರಣ ಇದೆ ಎಂದು ರುಜುವಾತುಪಡಿಸುವವರೇ ? |
| 2 ನೇ ಅಂಶ | : | ವಾದಿಯು ಅನುಕೂಲತೆಯ ಸಂತೂಲನೆ ತನ್ನ ಪರ ಇದೆ ಎಂದು ರುಜುವಾತುಪಡಿಸುವವರೇ ? |
| 3 ನೇ ಅಂಶ | : | ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡದೆ ಇದ್ದರೆ ವಾದಿಗೆ ತುಂಬಲಾದ ನಷ್ಟ ಆಗುವುದೇ? |
| 4 ನೇ ಅಂಶ | : | ಯಾವ ಆದೇಶ ? |

**15.** ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರಗಳು ಕೆಳಗಿನಂತೆಃ-

| | | |
|---|---|---|
| 1 ನೇ ಅಂಶ | : | ಸಕಾರಾತ್ಮಕವಾಗಿ |
| 2 ನೇ ಅಂಶ | : | ಸಕಾರಾತ್ಮಕವಾಗಿ |
| 3 ನೇ ಅಂಶ | : | ಸಕಾರಾತ್ಮಕವಾಗಿ |
| 4 ನೇ ಅಂಶ | : | ಅಂತಿಮ ಆದೇಶದಂತೆ, ಈ ಕೆಳಗೆ ವಿವರಿಸಿದ ಕಾರಣಗಳಿಗಾಗಿ. |

## ಕಾರಣಗಳು

16. **1 ನೇ ಅಂಶಃ-** ವಾದಿಯು ತನ್ನ ಅರ್ಜಿಯ ಪ್ರಮಾಣ ಪತ್ರದಲ್ಲಿ ಹೇಳುವುದೇನೆಂದರೆ, ತಾನು ಮೇಲಿನ ಕೇಸಿನಲ್ಲಿ 1 ವಾದಿಯಿರುತ್ತೇನೆ. ತನಗೆ ಕೇಸಿನ ವಿದ್ಯಾಮಾನಗಳು ತಿಳಿದಿರುತ್ತದೆ. ತಾನು ಈ ಪ್ರಮಾಣಪತ್ರವನ್ನು 2 ನೇ ವಾದಿಯ ಪರವಾಗಿ ಸಹ ಸಲ್ಲಿಸುತ್ತಿದ್ದೇನೆ. ತಾನು ಪ್ರತಿವಾದಿಗಳ ವಿರುದ್ಧ ದಾವಾ ಸೊತ್ತಿನ ಸಂಬಂಧ ತಮ್ಮ ಭಾಗದ ಹಿಸ್ಸಾ ಹಕ್ಕನ್ನು ಕೋರಿ ದಾವಾ ಸಲ್ಲಿಸುತ್ತಿದ್ದು ದಾವಾದಲ್ಲಿ ಹೇಳಿರುವ ಸಂಗತಿಗಳನ್ನು ಈ ಪ್ರಮಾಣಪತ್ರದ ಒಂದು ಭಾಗವಾಗಿ ಪರಿಗಣಿಸುವಂತೆ ಪ್ರಾರ್ಥನೆ. ಮೇಲಿನ ಕೇಸಿನಲ್ಲಿ ದಾವಾ ಶೆಡ್ಯೂಲ್ ಸೊತ್ತುಗಳು 1 ನೇ ಪ್ರತಿವಾದಿ /1 ನೇ ಎದುರುದಾರರ ಹೆಸರಿನಲ್ಲಿರುವ ಜಂಟಿ ಅನುಭವದ ಪಿತ್ರಾರ್ಜಿತ ಸೊತ್ತಾಗಿರುತ್ತದೆ. ತಾನು 1 ನೇ ಪ್ರತಿವಾದಿಯ ಮಗನಾದ ಗಣೇಶ ಇವರನ್ನು ದಿನಾಂಕ 30.05.2019 ರಂದು ವಿವಾಹವಾಗಿರುತ್ತೇನೆ. ತನ್ನ ಮತ್ತು ಗಣೇಶ ಇವರ ದಾಂಪತ್ಯಿಕ ಜೀವನದಿಂದ ರಕ್ಷ ಜಿ. ಎನ್ನುವ ಹೆಣ್ಣು ಮಗು ಜನಿಸಿರುತ್ತದೆ. ಈ ತನ್ನ ಮತ್ತು ತನ್ನ ಮಗುವಿನ ಜೀವನ ನಿರ್ವಹಣೆಗೆ ಊಟ, ಬಟ್ಟೆಔಷಧೋಪಚಾರಕ್ಕೆಂದು ಏನೊಂದು ಹಣ ನೀಡುತ್ತಿಲ್ಲ. ಈ ಕರಣದಿಂದ ತಾನು ತಮ್ಮ ಪಾಲಿನ ಕಾನೂನು ಬದ್ದ ಹಿಸ್ಸಾ ಹಕ್ಕನ್ನು ಕೋರಿ ದಾವಾ ಸಲ್ಲಿಸುತ್ತಿದ್ದು, ಪ್ರತಿವಾದಿಗಳು ತನಗೆ ಮತ್ತು ತನ್ನ ಮಗುವಿಗೆ ಮೋಸ ಮಾಡುವ ದುರುದ್ದೇಶದಿಂದ ದಾವಾ ಶೆಡ್ಯೂಲ್ ಸೊತ್ತುಗಳನ್ನು ಬೇರೆಯವರಿಗೆ ಮಾರಾಟ ಮಾಡುವ ಪ್ರಯತ್ನ ನಡೆಸುತ್ತಿದ್ದಾರೆ. ಒಂದೊಮ್ಮೆ ದಾವಾ ಶೆಡ್ಯೂಲ್ ಸೊತ್ತುಗಳನ್ನು ಮಾರಾಟ ಮಾಡಿದಲ್ಲಿ ತನಗೆ ಮತ್ತು ತನ್ನ ಮಗುವಿಗೆ ತುಂಬಲಾರದ ಲುಕ್ಸಾನು ಅನ್ಯಾಯ ಉಂಟಾಗುತ್ತದೆ. ಅಲ್ಲದೆ ತಾನು ಮತ್ತು ತನ್ನ ಮಗು ಬೀದಿಪಾಲಾಗುವ ಹೆಚ್ಚಿನ

ಸಾಧ್ಯತೆ ಇರುತ್ತದೆ. ಸದರಿ ವಿಷಯ ತನಗೆ ಬೇರೆಯವರ ಮುಖಾಂತರ ತಿಳಿದು ಬಂದಿರುತ್ತದೆ. ಈ ಕಾರಣಕ್ಕಾಗಿ ಲಗ್ತು ಹಾಜರಿಸಿದ ಅರ್ಜಿಯನ್ನು ಏಕತರ್ಫಿ ತಾತ್ಕಾಲಿಕ ಪ್ರತಿಬಂಧಕಾಜ್ಞೆ ಆದೇಶ ಮಾಡಬೇಕಾಗಿ ನ್ಯಾಯಾಲಯದಲ್ಲಿ ಪ್ರಾರ್ಥನೆ.

**17.** ಪ್ರತಿವಾದಿಯು ನ್ಯಾಯಾಲಯಕ್ಕೆ ಹಾಜರಾಗಿ ಪ್ರತಿವಾದ ಪತ್ರ ಸಲ್ಲಿಸಿ ಸದರಿ ಪ್ರತಿವಾದ ಪತ್ರದ ಅಂಶವನ್ನು ತನ್ನ ಪರ ಅರ್ಜಿ ಸಂಖ್ಯೆ 1 ಕ್ಕೆ ತಕರಾರು ಎಂದು ಪರಿಗಣಿಸಲು ಕೋರಿರುತ್ತಾರೆ. ವಾದಿಯ ಈ ದಾವೆಯು ಕಾನೂನಿನಡಿಯಾಗಲೀ ಅಥವಾ ವಾಸ್ತವಾಂಶಗಳಡಿಯಾಗಲೀ ನಿಲ್ಲತಕ್ಕದಾಗಿರುದೇ ಈ ಹಂತದಲ್ಲಿಯೇ ವಜಾಗೊಳಿಸಲು ಯೋಗ್ಯವಾಗಿರುತ್ತದೆ. ವಾದಿಯು ತನ್ನ ವಾದಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯಗಳು ಶುದ್ಧ ಸುಳ್ಳಾಗಿದ್ದು, ಈ ಪ್ರತಿವಾದಿಯರು ಈ ಮೂಲಕ ನಿರ್ಧಿಷ್ಟವಾಗಿ ಸುಳ್ಳೆಂದು ಅಲ್ಲಗಳೆಯುತ್ತಾರೆ. ವಾದ ಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯಗಳನ್ನು ವಾದಿಯೇ ಖುದ್ದು ಸಾಬೀತು ಪಡಿಸತಕ್ಕದಾಗಿರುತ್ತದೆ. ವಾದಿಯರು ಹಾಗೂ ಪ್ರತಿವಾದಿಗಳು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರು ಎನ್ನುವುದು ಶುದ್ಧ ಸುಳ್ಳಾಗಿದ್ದು ವಾದಿಯೇ ಖುದ್ದು ರುಜುವಾತುಪಡಿಸತಕ್ಕದ್ದಾಗಿರುತ್ತದೆ. ದಾವಾ ಶೆಡ್ಯೂಲ್ ಸೊತ್ತುಗಳು ಒಟ್ಟು ಕುಟುಂಬದ ಆಸ್ತಿಗಳಾಗಿರುವುದಿಲ್ಲ. 1 ನೇ ಪ್ರತಿವಾದಿ ಹಾಗೂ ಅವರ ತಾಯಿಯಾದ ಮೃತ ಹೂವಮ್ಮಳ ಸ್ವಯಾರ್ಜಿತ ಸೊತ್ತುಗಳಾಗಿರುತ್ತವೆ. ದಾವಾ ಶೆಡ್ಯೂಲ್ ಸೊತ್ತುಗಳು ಪಿತ್ರಾರ್ಜಿತ ಆಸ್ತಿಗಳೆನ್ನುವುದನ್ನು ವಾದಿಯೇ ರುಜುವಾತುಪಡಿಸತಕ್ಕದ್ದಾಗಿರುತ್ತದೆ.

**18.** ವಾದಿಗೆ ಈ ದಾವೆ ಹಾಕಲು ಕಾನೂನಿನಲ್ಲಿ ಮಾನ್ಯತೆ ಇರುವುದಿಲ್ಲ. ಹಾಗೆಯೇ 2 ನೇ ವಾದಿಯ ಪರ ದಾವೆ ಸಲ್ಲಿಸಲು ಸಹ ಸ್ವಾಭಾವಿಕ ರಕ್ಷಕಿ ಎಂಬ ಬಗ್ಗೆ ಸಂಬಂಧಿಸಿದ ನ್ಯಾಯಾಲಯದಿಂದ ಅನುಮತಿ ತೆಗೆದುಕೊಳ್ಳದೆ ತಂದ ಈ ದಾವೆಯನ್ನು ಪ್ರಾಥಮಿಕ ವಿಚಾರಣೆಗೊಳಪಡಿಸಿ, ವಜಾಗೊಳಿಸತಕ್ಕದ್ದಾಗಿರುತ್ತದೆ. 1 ನೇ ವಾದಿಯ ಗಂಡ ವಿವಾಹ ಪೂರ್ವದಲ್ಲಿಯೇ ಅಂದರೆ ಚಿಕ್ಕ ವಯಸ್ಸಿನಲ್ಲಿಯೇ ಮನೆಬಿಟ್ಟು ಹೋದವನು ಮನೆಗೆ ಬಾರದೆ, ಹೊರಗಡೆ ಊರುಗಳಲ್ಲಿಯೇ ನೆಲೆಸಿದ್ದು ಇರುತ್ತದೆ. 1 ನೇ ವಾದಿಯ ವಿವಾಹದ ನಂತರುವೂ ಸಹ 1 ನೇ ವಾದಿಯ ಗಂಡ ತಂದೆ ತಾಯಿ ಮತ್ತು ಸಹೋದರರ ಜೊತೆ ವಾಸವಾಗಿರದೆ ಪ್ರತ್ಯೇಕ ಸಂಸಾರ ವ್ಯವಹಾರದಲ್ಲಿ ತೊಡಗಿಸಿಕೊಂಡಿರುತ್ತಾನೆ. 1 ನೇ ವಾದಿಯು ಈ ಪ್ರತಿವಾದಿಯರುಗಳ ಮನೆಯಲ್ಲಿ ಯಾವತ್ತೂ ಸಹ ವಾಸವಾಗಿರುವುದಿಲ್ಲ. ವಾದಿಯು ಸುಳ್ಳು ಕಾರಣಗಳನ್ನು ಹೇಳಿಕೊಂಡು ತಂದ ಈ ದಾವೆಯನ್ನು ವಜಾಗೊಳಿಸತಕ್ಕದ್ದಾಗಿರುತ್ತದೆ.

**19.** ವಾದಿ ಹೇಳಿದಂತೆ 1 ನೆ ವಾದಿಯ ಗಂಡ ಮರಣ ಹೊಂದಿದ ನಂತರ ಪ್ರತಿವಾದಿಯರು ಜಗಳವಾಡುತ್ತಿದ್ದರು ಎನ್ನುವುದಾಗಲಿ, ಈ ಸಮಯದಲ್ಲಿ 1 ನೇ ವಾದಿ ಗರ್ಭಿಣಿಯಾಗಿದ್ದಳು ಎನ್ನುವುದಾಗಲೀ, ವಾದಿ ಮತ್ತು ವಾದಿಯ ಮಗಳಿಗೆ ಅನ್ನ ಆಹಾರ ಬಟ್ಟೆ ಏನೊಂದು ಕೊಡದೆ ಹಿಂಸೆ ನೀಡಿದ್ದರು ಎಂಬ ಇತ್ಯಾದಿ ಎಲ್ಲಾ ವಿಷಯಗಳು ವಾದಿ ಈ ದಾವೆಗಾಗಿ ಸೃಷ್ಟಿಸಿಕೊಂಡ ಕಾಲ್ಪನಿಕ ಕಟ್ಟು ಕತೆಯಾಗಿರುತ್ತದೆ. ಈ ಪ್ರತಿವಾದಿಯರು ವಾದಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯಗಳನ್ನು ಸಂಪೂರ್ಣವಾಗಿ ಸುಳ್ಳೆಂದು ನಿರ್ದಿಷ್ಟವಾಗಿ ಈ ಮೂಲಕ ಅಲ್ಲಗಳೆಯುತ್ತಾರೆ.

**20.** ವಾದಿಯು ದಾವಾ ಸ್ವತ್ತುಗಳನ್ನು ಹಿಸ್ಸೆ ವಿಭಾಗ ಮಾಡಿಕೊಡುವಂತೆ 2020 ರ ಸೆಪ್ಟೆಂಬರ್ ತಿಂಗಳಿನಲ್ಲಿ ಕೇಳಿಕೊಂಡಿದ್ದಳು ಎನ್ನುವುದಾಗಲಿ, ಇದಕ್ಕೆ ಪ್ರತಿವಾದಿಗಳು ನಿರಾಕರಿಸಿದರು ಎಂಬ ಇತ್ಯಾದಿ ಎಲ್ಲಾ ವಿಷಯಗಳನ್ನು ವಾದಿಯೇ ಖುದ್ದು ಸಾಬೀತುಪಡಿಸತಕ್ಕದ್ದಾಗಿರುತ್ತದೆ. 1 ನೇ ವಾದಿಯ ಹಿಂಸೆ-ಕಿರುಕುಳದಿಂದ ಮಾನಸಿಕವಾಗಿ ಮತ್ತು ದೈಹಿಕವಾಗಿ ನೊಂದು ವಾದಿಯ ಗಂಡ ಮರಣ ಹೊಂದಿರುತ್ತಾನೆ. ಈ ಎಲ್ಲಾ ವಸ್ತುಸ್ಥಿತಿ ಮತ್ತು ವಾಸ್ತವಾಂಶಗಳನ್ನು ಮರೆಮಾಚಿ ಈ ಪ್ರತಿವಾದಿಯರ ವಿರುದ್ಧ ತಂದ ಈ ಸುಳ್ಳು ದಾವೆಯನ್ನು ವಜಾಗೊಳಿಸತಕ್ಕದ್ದಾಗಿರುತ್ತದೆ.

**21.** ದಾವಾ ಶೆಡ್ಯೂಲ್ ಸೊತ್ತುಗಳ 1 ನೇ ಪ್ರತಿವಾದಿಯ ಮತ್ತು ಇವರ ಹೆಂಡತಿ ಯಶೋದಮ್ಮಳ ಸ್ವಯಾರ್ಜಿತ ಸೊತ್ತಾಗಿದ್ದು, ವಾದಿಗಾಗಲಿ, ವಾದಿಯ ಮಗಳಿಗಾಗಲಿ ದಾವಾ ಶೆಡ್ಯೂಲ್ ಸೊತ್ತಿನಲ್ಲಿ ಯಾವುದೇ ರೀತಿಯ ಹಕ್ಕು, ಮಾಲಿಕತ್ವ ಇರುವುದಿಲ್ಲ. ವಾದಿ-ಪ್ರತಿವಾದಿಯರುಗಳ ಒಟ್ಟು ಕುಟುಂಬದ ಆಸ್ತಿತ್ವದಲ್ಲಿರುವುದಿಲ್ಲ. ಪ್ರತಿವಾದಿಯರುಗಳಿಗೆ ಹೆದರಿಸಿ, ಬೆದರಿಸಿ, ಅಕ್ರಮ ಲಾಭ ಪಡಯಬೇಕೆಂದು ತಂದ ವಾದಿಯ ಈ ಸುಳ್ಳು ದಾವೆಯನ್ನು ವಜಾಗೊಳಿಸತಕ್ಕದ್ದಾಗಿರುತ್ತದೆ. ವಾದಿಯ ಈ ದಾವೆಗೆ ಯಾವುದೇ ರೀತಿಯ ವ್ಯಾಜ್ಯ ಕಾರಣ ಉಂಟಾಗಿರುವುದಿಲ್ಲ. ಷಧ್ರಿ ವ್ಯಾಜ್ಯ ಕಾರಣವು ಮೋಸದ್ದು, ಸುಳ್ಳಿನಿಂದ ಕೂಡಿದ್ದಾಗಿದ್ದು, ವಾದಿ ಈ ದಾವೆಗಾಗಿ ಸೃಷ್ಟಿಸಿಕೊಂಡ ಕಾಲ್ಪನಿಕ ವ್ಯಾಜ್ಯ ಕಾರಣವಾಗಿದ್ದು, ವಾದಿಯ ದಾವೆಯನ್ನು ವಜಾಗೊಳಿಸತಕ್ಕದ್ದಾಗಿರುತ್ತದೆ.

22. ವಾದಿಯು ದಾವಾ ಶೆಡ್ಯೂಲ್ ಸೊತ್ತುಗಳನ್ನು ಸರಿಯಾಗಿ ಮೌಲ್ಯಮಾಪನಕ್ಕೆ ಒಳಪಡಿಸಿರುವುದಿಲ್ಲ. ಸದ್ರಿ ದಾವೆಯಲ್ಲಿ ನ್ಯಾಯಾಲಯದ ಶುಲ್ಕ ಪಾವತಿಸಿದ್ದು ಸರಿ ಇರುವುದಿಲ್ಲವಾದ್ದರಿಂದ ವಾದಿಯ ದಾವೆಯನ್ನು ವಜಾಗೊಳಿಸತಕ್ಕದ್ದಾಗಿರುತ್ತದೆ. ವಾದಿಗೆ ದಾವಾಸ್ಥಿಗಳ ಬಗ್ಗೆ ಮಾಹಿತಿಯಾಗಲಿ, ವಸ್ತುಸ್ಥಿತಿಯಾಗಲಿ ತಿಳಿದಿರುವುದಿಲ್ಲ. ದಾವಾ ಸೊತ್ತುಗಳ ವರ್ಣನೆ, ಸ್ವರೂಫ ಚತುರ್ಗಡಿಗಳು ಸರಿ ಇರುವುದಿಲ್ಲ ಹಾಗೂ ವಾದಿಗೆ ದಾವಾಸ್ಥಿಯನ್ನು ಗುರುತಿಸಲು ಅಸಾಧ್ಯವಾಗಿದ್ದು, ವಾದಿಯ ದಾವೆಯನ್ನು ವಜಾಗೊಳಿಸತಕ್ಕದ್ದಾಗಿರುತ್ತದೆ. ವಾದಿಯು ತಮ್ಮ ವಾದಿಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯಗಳು ಶುದ್ಧ ಸುಳ್ಳಾಗಿದ್ದು, ಈ ಪ್ರತಿವಾದಿಯರು ಈ ಮೂಲಕ ಸುಳ್ಳೆಂದು ನಿರ್ದಿಷ್ಟವಾಗಿ ಅಲ್ಲಗಳೆಯುತ್ತಾರೆ. ವಾದಿ-ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರಾಗಿರುವುದಿಲ್ಲ ಮತ್ತು ದಾವಾಶೆಡ್ಯೂಲ್ ಸೊತ್ತುಗಳು ವಾದಿಯರ ಹಾಗೂ ಪ್ರತಿವಾದಿಯರುಗಳ ಪಿತ್ರಾರ್ಜಿತ ಆಸ್ತಿಗಳಾಗಿರುವುದಿಲ್ಲ. ವಾದಪತ್ರದ ಎಲ್ಲಾ ಅಂಶಗಳನ್ನು ವಾದಿಯೇ ಖುದ್ದು ರುಜುವಾತುಪಡಿಸಿತಕ್ಕದ್ದಾಗಿರತ್ತದೆ. ಸದ್ರಿ ದಾವೆಯ ವಾಸ್ತವಿಕತೆಗೆ ದೂರವಾಗಿದ್ದು, ವಾದಿಯ ದಾವೆಯನ್ನು ವಜಾಗೊಳಿಸತಕ್ಕದ್ದಾಗಿರುತ್ತದೆ. ವಾದಿಯು ಮಾನ್ಯ ಘನ ನ್ಯಾಯಾಲಯಕ್ಕೆ ಶುದ್ಧ ಹಸ್ತಳಾಗಿ ಬಂದಿರುವುದಿಲ್ಲ. ವಾದಿಯ ಪರ ವಾದಬಾಹುಳ್ಯವಿರುವ ಕೇಸು ಮತ್ತು ಸಮಾನತೆಯ ಸಂಕುಲತೆ ವಾದಿ ಪರ ಇರುವುದಿಲ್ಲ. ವಾದಿಯು ಪ್ರತಿವಾದಿಯರಿಗೆ ಆಗದವರ ಮಾತು ಕೇಳಿಕೊಂಡು ತಂದ ಈ ಸುಳ್ಳು ದಾವೆಯನ್ನು ವಜಾಗೊಳಿಸತಕ್ಕದ್ದಾಗಿರುತ್ತದೆ. ಆದ್ದರಿಂದ ವಾದಿಯ ಅರ್ಜಿಯನ್ನು ವಜಾ ಗೊಳಿಸುವಂತೆ ಕೋರಿರುತ್ತಾರೆ.

**23.** ವಾದಿಯು ತನ್ನ ವಾದ ಪತ್ರದಲ್ಲಿ ಸಲ್ಲಿಸಿರುವ ವಂಶವೃಕ್ಷವನ್ನು ನೋಡಲಾಗಿ ಈಶ್ವರಪ್ಪ ಮತ್ತು ಯಶೋಧಮ್ಮ ಇವರುಗಳಿಗೆ ದಾವಾ ಆಸ್ತಿಯು ಮೂಲತಃ ಪಿತ್ರಾರ್ಜಿತ ಆಸ್ತಿಯಾಗಿದ್ದು, ತದನಂತರದಲ್ಲಿ ವಾದಿಯು ಈಶ್ವರಪ್ಪನವರ ಮಗನಾದ ಗಣೇಶ ಬಿ. ಇವರನ್ನು ವಿವಾಹವಾಗಿ, 2 ನೇ ವಾದಿ ರಕ್ಷರವರು ಜನಿಸಿದ ನಂತರ ಮೃತಪಟ್ಟಿದ್ದು, ತದನಂತರದಲ್ಲಿ ವಾದಿಯವರನ್ನು ಈಶ್ವರಪ್ಪ ಮತ್ತು ಕುಟುಂಬ ವರ್ಗದವರು ನಿರ್ಲಕ್ಷ ಮಾಡಿದ್ದು ಹಾಗೂ ವಾದಿ ಮತ್ತು ಮಗಳಿಗೆ ಇರುವ ಹಕ್ಕನ್ನು ಮೊಟಕುಗೊಳಿಸುವ ಸಲುವಾಗಿ ದಾವಾ ಆಸ್ತಿಗಳನ್ನು ಮಾರಾಟ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ ಎಂಬುದಾಗಿ ತನ್ನ ಪ್ರಮಾಣ ಪತ್ರದಲ್ಲಿ ಹೇಳಿರುತ್ತಾರೆ. ಸದರಿ ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳೆಂದು ಮೇಲ್ನೋಟಕ್ಕೆ ತೋರಿಸಲು ವಾದಿಯು ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳಲ್ಲಿ ಸರ್ವೆ.ನಂ.85 ಬರುವೆ ಗ್ರಾಮ, ಸರ್ವೆ ನಂ.84 ಬರುವೆ ಗ್ರಾಮ ಇದರ ಪಹಣಿಗಳನ್ನು ಹಾಜರುಪಡಿಸಿದ್ದು ಇವುಗಳು ಕೃಷ್ಣಮೂರ್ತಿ ರಾವ್, ಈಶ್ವರಪ್ಪ ನಾಯ್ಕ ರವರ ಹೆಸರಿನಲ್ಲಿದ್ದು ಕಬ್ಜೆ ಮತ್ತು ಸ್ವಾಧೀನದ ರೀತಿ ಕಲಂ ನಂ.10 ರಲ್ಲಿ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆಂದು ನಮೂದು ಆಗಿರುತ್ತದೆ.

**24.** ಎಂ.ಆರ್.19/1988-89 ನ್ನು ಹಾಜರು ಪಡಿಸಿದ್ದು ಸದರಿ ಎಂ. ಆರ್ . ಪ್ರಕಾರ ದಾವಾ ಆಸ್ತಿಗಳು ನಾಗಮ್ಮ, ಲೋಕಪ್ಪ ಮತ್ತು ಈಶ್ವರ ನಾಯ್ಕ ಇವರುಗಳ ಹೆಸರಿನಲ್ಲಿ ಹಕ್ಕು ಬದಲಾವಣೆಯಾದ ಬಗ್ಗೆ ಸೂಚಿಸುತ್ತದೆ. ಎಂ.ಆರ್.9/98-99 ಯನ್ನು ಪರೀಶೀಲಿಸಿ ನೋಡಲಾಗಿ ಅದರಲ್ಲಿ ಶ್ರೀಮತಿ ಹೂವಮ್ಮ ಕೋಂ ಕರಡಿ ನಾಯ್ಕ ಒಂದನೇ ಪ್ರತಿವಾದಿಯ ತಾಯಿ ದಿನಾಂಕ 27.10.1998 ರಂದು ಮೃತ ಪಟ್ಟಿದ್ದು, ಸದರಿಯವರು ಮೃತ ಪಟ್ಟ ಆಧಾರದ ಮೇಲೆ ದಾವಾ ಆಸ್ತಿಗಳನ್ನು ಈಶ್ವರ

ನಾಯ್ಕು ರವರ ಹೆಸರಿಗೆ ಪೌತಿ ಆಧಾರದ ಮೇಲೆ ನಮೂದು ಆದ ಬಗ್ಗೆ ದೃಢಪಡಿಸುತ್ತದೆ. ಡಿ.ಆರ್.ನಂ.22/2020-21 ಮನೆಯ ತೆರಿಗೆ ಡಿಮ್ಯಾಂಡ್ ರಿಜಿಸ್ಟರ್ ನ್ನು ಹಾಜರು ಪಡಿಸಿದ್ದು, ಅದರ ಪ್ರಕಾರ ಈಶ್ವರಪ್ಪ ರವರ ಹೆಂಡತಿ ಯಶೋಧಮ್ಮ ಇವರ ಹೆಸರಿನಲ್ಲಿ ದಾಖಲಾಗಿದ್ದು ಕಂಡುಬರುತ್ತದೆ.

**25.** ಗಣೇಶರವರು ದಿನಾಂಕ 28.02.2020 ರಂದು ಮೃತಪಟ್ಟ ಬಗ್ಗೆ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಮೃತ ಸಂಬಂಧಿಯ ಹೆಸರಿನ ಜಾಗದಲ್ಲಿ 1 ನೇ ವಾದಿಯ ಹೆಸರನ್ನು ಹೆಂಡತಿ ಎಂದು ನಮೂದು ಮಾಡಲಾಗಿರುತ್ತದೆ. ಅದೇ ರೀತಿ ಪಡಿತರ ಚೀಟಿಯನ್ನು ಹಾಜರು ಪಡಿಸಿದ ವಾದಿ ಮತ್ತು ಗಣೇಶ ಬಿ. ರವರು ಗಂಡ ಹೆಂಡತಿ ಮತ್ತು 2 ನೇ ವಾದಿ ರಕ್ಷ ಇವರು ಮಗಳು ಎಂದು ನಮೂದು ಇರುತ್ತದೆ. ಇಲ್ಲಿ ಪ್ರಮುಖವಾಗಿ ದಾವಾ ಆಸ್ತಿಗಳನ್ನು ಪಿತ್ರಾರ್ಜಿತ ಆಸ್ತಿಗಳೆಂದು ತೋರಿಸಲು ವಾದಿಯು ಹಾಜರು ಪಡಿಸಿದಂತಹ ಹಕ್ಕು ಬದಲಾವಣೆ ವಹಿಗಳು ಪೌತಿ ಆಧಾರದ ಮೇಲೆ ವಾದಿಯ ಅತ್ತೆ ಮಾವ ಇವರ ಹೆಸರಿಗೆ ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತುಗಳೆಂದು ತೋರಿಸುತ್ತದೆ.

**26.** ಆ ಪೈಕಿ ಪ್ರತಿವಾದಿಗಳು ನ್ಯಾಯಾಲಯಕ್ಕೆ ಹಾಜರಾಗಿ, 2 ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರವನ್ನು ಸಲ್ಲಿಸಿ ಸದರಿ ಪ್ರತಿವಾದ ಪತ್ರವನ್ನು ತಕರಾರು ಎಂದು ಪರಿಗಣಿಸಲು ಮೆಮೋ ಸಲ್ಲಿರುತ್ತಾರೆ. ತನ್ನ ಪ್ರತಿವಾದ ಕಾಲಕ್ಕೆ ವಾದಿಯ ದಾವಾ ಪತ್ರದ ಅಂಶಗಳನ್ನು ಅಲ್ಲಗಳೆಯುವುದನ್ನು ಬಿಟ್ಟು ನಿರ್ದಿಷ್ಟವಾದಂತಹ ಯಾವುದೇ ಪ್ರತಿರಕ್ಷಣೆಯನ್ನು ತೆಗೆದುಕೊಂಡಿರುವುದಿಲ್ಲ.

ಬದಲಾಗಿ ದಾವೆಯನ್ನು ರುಜುವಾತು ಪಡಿಸುವ ಹೊಣೆಗಾರಿಕೆಯು ವಾದಿಗೆ ಇರುತ್ತದೆ ಎನ್ನುವುದನ್ನು ಮಾತ್ರ ವಾದ ಪತ್ರದ ಅಂಶವನ್ನು ಅಲ್ಲಗಳೆಯುತ್ತಾರೆ.

**27.** ಈ ಹಂತದಲ್ಲಿ ಒಂದು ವೇಳೆ ದಾವಾ ಆಸ್ತಿಗಳನ್ನು ಪ್ರತಿವಾದಿಗಳು ಮಾರಾಟ ಮಾಡಿದ್ದೇ ಆದಲ್ಲಿ ಸದರಿ ಆಸ್ತಿಗಳ ಸ್ವರೂಪ ಬದಲಾವಣೆ ಆಗುತ್ತದೆ ಹಾಗೂ 3 ನೇ ವ್ಯಕ್ತಿಯ ಹಿತಾಸಕ್ತಿ ಸೃಷ್ಟಿಯಾಗುತ್ತದೆ. ಒಂದು ವೇಳೆ ನ್ಯಾಯಾಲಯವು ವಾದಿಯ ಪರವಾಗಿ ದಾವೆಯನ್ನು ಡಿಕ್ರಿ ಮಾಡಿದರೆ ಅಂತಹ ಸಂದರ್ಭದಲ್ಲಿ ವಾದಿಗಳ ಹಿಸ್ಸೆಯನ್ನು ಮತ್ತು ಸ್ವಾಧೀನವನ್ನು ಕೊಡಿಸುವಲ್ಲಿ ಸಾಕಷ್ಟು ವಿಳಂಬ ಉಂಟಾಗುವ ಸಾಧ್ಯತೆ ಇರುತ್ತದೆ. ಒಂದು ವೇಳೆ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಮೂಲಕ ದಾವಾ ಆಸ್ತಿಗಳನ್ನು ಮಾರಾಟ ಮಾಡಬಾರದು ಎಂದು ಪ್ರತಿವಾದಿಗಳನ್ನು ಪ್ರತಿಬಂದಿಸಿದರೆ ಪ್ರತಿವಾದಿಗಳಿಗೆ ಯಾವುದೇ ಹಾನಿ ಅಥವಾ ನಷ್ಟ ಉಂಟಾಗುವುದಿಲ್ಲ. ಕಾರಣ ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಯಾಗಿದ್ದು ಈಶ್ವರ ನಾಯ್ಕ ಮತ್ತು ಅವರ ಮಕ್ಕಳಾದ ಚಂದ್ರಕಲಾ, ಹೇಮರಾಜ್, ಮೃತ ಗಣೇಶ ಇವರುಗಳಿಗೆ ಸಮಾನವಾದ ಹಕ್ಕು ಇರುತ್ತದೆ. ಆದ್ದರಿಂದ ಈ ಹಂತದಲ್ಲಿ ವಾದಿಯು ತನ್ನ ಪರ ನಿರ್ಧರಿಸಲು ಮೇಲ್ನೋಟಕ್ಕೆಪ್ರಕರಣ ಇದೆ ಎಂಬುದನ್ನು ರುಜುವಾತುಪಡಿಸಿರುತ್ತಾರೆ. ಆದ್ದರಿಂದ ಸದರಿ ಪ್ರಕರಣದಲ್ಲಿ ಅಂಶ **1** ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

**28.** <u>**2** ಮತ್ತು **3** ನೇ ಅಂಶಃ</u>- ಅಂಶ 1 ರಲ್ಲಿ ಹೇಳಿದ ಕಾರಣಗಳಿಗಾಗಿ ಹಾಗೂ ದಾವಾ ಆಸ್ತಿಯನ್ನು ಪ್ರತಿವಾದಿಗಳು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾರೆಂದು ಮತ್ತು ದಾವಾ ಆಸ್ತಿಯ ಸ್ವರೂಪ ಮೇಲ್ನೋಟಕ್ಕೆ ಪಿತ್ರಾರ್ಜಿತ ಆಸ್ತಿಗಳೆಂದು ಎಂದು ವಾದಿಯು ಮೇಲ್ನೊಟಕ್ಕೆ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವಲ್ಲಿ

ಯಶಸ್ವಿಯಾಗಿದ್ದು, ಈ ಹಂತದಲ್ಲಿ 3 ನೇ ವ್ಯಕ್ತಿ ಹಿತಾಸಕ್ತಿಯನ್ನು ಸೃಷ್ಟಿ ಮಾಡುವ ಸಾಧ್ಯತೆ ಇರುವುದರಿಂದ ಹಾಗೂ ದಾವೆಯ ಸ್ವರೂಪವನ್ನು ಬದಲಾಗಬಾರದೆಂಬ ಉದ್ದೇಶದಿಂದ ಪ್ರತಿವಾದಿಯವರು ದಾವಾ ಆಸ್ತಿಯನ್ನು ಮಾರಾಟ ಮಾಡಬಾರದೆಂದು ನಿರ್ಬಂದಿಸಿದರೆ ಪ್ರತಿವಾದಿಗಳಿಗೆ ಯಾವುದೇ ರೀತಿಯಲ್ಲಿ ಹಾನಿಯಾಗಲೀ ನಷ್ಟವಾಗಲಿ ಉಂಟಾಗುವುದಿಲ್ಲ.

**29.** ಒಂದು ವೇಳೆ ವಾದಿಯು ಹೇಳಿದಂತೆ ಪ್ರತಿವಾದಿಗಳು ದಾವಾ ಆಸ್ತಿಯನ್ನು ಮಾರಾಟ ಮಾಡಿದರೆ ಅಂತಹ ಸಂದರ್ಭದಲ್ಲಿ ವಾದಿಗಳ ಹಕ್ಕು ನಿರ್ಧಾರ ಮಾಡಲು ಹಾಗೂ ಒಂದು ವೇಳೆ ವಾದಿಗಳ ಪರ ದಾವೆಯನ್ನು ಡಿಕ್ರಿ ಮಾಡುವ ಸನ್ನಿವೇಶ ಬಂದರೆ ಅಂತಹ ಸಂದರ್ಭದಲ್ಲಿ 3 ನೇ ವ್ಯಕ್ತಿಯ ಹಿತಾಸಕ್ತಿಯನ್ನು ಪರಿಗಣಿಸಿ ತದನಂತರದಲ್ಲಿ ವಾದಿಯವರಿಗೆ ಅವರ ಹಕ್ಕನ್ನು ಮತ್ತು ಸ್ವಾಧೀನವನ್ನು ಕೊಡಿಸಬೇಕಾದ ಸನ್ನಿವೇಶಗಳು ಉಂಟಾಗುತ್ತದೆ. ಆದ್ದರಿಂದ ಸಾಕಷ್ಟು ಕಾಲ ವಿಳಂಬ ಆಗುವ ಮತ್ತು ದಾವೆಯ ಸ್ವರೂಪ ಬದಲಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಇಲ್ಲಿ ಸಮಾನತೆಯ ಸಂತುಾಲನೆ ವಾದಿಯ ಪರವಾಗಿ ಇರುತ್ತದೆ. ಒಂದು ವೇಳೆ ದಾವಾ ಆಸ್ತಿಗಳನ್ನು ಮಾರಾಟ ಮಾಡಿದರೆ ವಾದಿಗಳಿಗೆ ತುಂಬಲಾರದ ಹಾನಿ ಮತ್ತು ನಷ್ಟ ಉಂಟಾಗುತ್ತದೆ. ಆದ್ದರಿಂದ ಸದರಿ ಪ್ರಕರಣದಲ್ಲಿ ತಾತ್ಕಾಲಿಕ ನಿರ್ಭಂದಕಾಜ್ಞೆಯನ್ನು ಮಂಜೂರು ಮಾಡದಿದ್ದರೆ ವಾದಿಗೆ ತುಂಬಲಾರದ ನಷ್ಟ ಮತ್ತು ಹಾನಿ ಉಂಟಾಗುತ್ತದೆ. ಆದರಿಂದ ಸದರಿ ಅಂಶ **2** ಮತ್ತು **3** ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

30. <u>4 ನೇ ಅಂಶಃ-</u> ಮೇಲೆ ಚರ್ಚಿಸಿರುವ ಕಾರಣಗಳಿಗಾಗಿ ನ್ಯಾಯಾಲಯ ಕೆಳಗಿನಂತೆ ಆದೇಶ ಮಾಡಲಾಗಿದೆ.

## ಆದೇಶ

ವಾದಿಯು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 1, ಆದೇಶ 39 ನಿಯಮ 1 ಮತ್ತು 2 ವ್ಯವಹಾರ ಪ್ರಕ್ರಿಯಾ ಸಂಹಿತೆಯನ್ನು ಪುರಸ್ಕರಿಸಲಾಗಿದೆ.

ಪ್ರತಿವಾದಿಯರಾಗಲೀ, ಅವರ ಪರ ಅಧಿಕಾರ ಪಡೆದ ಕೆಲಸಗಾರರಾಗಲಿ, ಅಥವಾ ಅವರಿಂದ ನಿರ್ದೇಶಿಸಲ್ಪಟ್ಟ ಯಾರೇ ಆಗಲಿ, ದಾವಾ ಸ್ವತ್ತಗಳನ್ನು ಬೇರೆ ಯಾವುದೇ ಮೂರನೇ ವ್ಯಕಿಗೆ ಈ ದಾವೆ ಇತ್ಯರ್ಥವಾಗುವವರೆಗೂ ಬೇರೆ ಯಾರಿಗೂ ಮಾರಾಟ ಮಾಡದಂತೆ ತಾತ್ಕಾಲಿಕವಾಗಿ ನಿರ್ಬಂಧಕಾಜ್ಞೆ ಆದೇಶ ಮಾಡಲಾಗಿದೆ.

ಖರ್ಚಿಗೆ ಯಾವುದೇ ಆದೇಶ ಇಲ್ಲ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲು ಹೇಳಿ, ನಂತರ ಓದಿ ಸೂಕ್ತ ತಿದ್ದುಪಡಿ ಮಾಡಿ ಇಂದು ದಿನಾಂಕ:19 ನೇ ಜುಲೈ, 2023 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲ್ಪಟ್ಟಿತು.)

(ರವಿಕುಮಾರ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಸನಗರ.